# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು-ಮಡಿಕೇರಿ

## SPL.C(Corruption) No. 61/2016

| | | | |
|---|---|---|---|
| ಸಾಕ್ಷಿದಾರರ ಹೆಸರು | : | **ಶ್ರೀ ಪೆಲಿಕ್ಸ್ ಸಂತೋಮಯೋರ್** | **PW - 17** |
| ತಂದೆಯ ಹೆಸರು | : | **ಲಾರೆನ್ಸ್** | **CW - 58** |
| ವಯಸ್ಸು | : | **74 ವರ್ಷ** | |
| ವೃತ್ತಿ | : | **ವ್ಯಾಪಾರ** | |
| ವಾಸ | : | **ಅಟ್ಟಿಹೊಳೆ ಗ್ರಾಮ, ಸೋಮವಾರಪೇಟೆ ತಾಲೂಕು** | |

**ಸಾಕ್ಷಿಯನ್ನು ದಿನಾಂಕ 05-07-2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಖ್ಯವಿಚಾರಣೆ: ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>**

ನಾನು ಫ್ರಾನ್ಸಿಸ್ ಕ್ಸೇವಿರ್ ಮೇನೇಜಸ್ ರವರ ಕಾಫಿ ತೋಟದಲ್ಲಿ ಜನರನ್ನು ಕರೆದು ತೋಟದಲ್ಲಿ ಕೆಲಸ ಮಾಡುವ ಕೆಲಸ (ರೈಟರ್ ಕೆಲಸ) ಮಾಡುತ್ತಿದ್ದೆನು. ಸದರಿ ಫ್ರಾನ್ಸಿಸ್ ಕ್ಸೇವಿರ್ ಮೇನೇಜಸ್ ರವರಿಗೆ 300 ಎಕರೆ ಕಾಫಿ ತೋಟ ಇತ್ತು. ನಾನು ಸುಮಾರು ವರ್ಷ ಸದರಿಯವರ ತೋಟ ನೋಡಿಕೊಂಡು ಇದ್ದೆ. ಸದರಿ ಜಮೀನನ್ನು ನಾನು ಪ್ರಾಮಾಣಿಕವಾಗಿ ನೋಡಿಕೊಂಡಿದ್ದಕ್ಕೆ 1 ಎಕರೆ ಜಮೀನು ದಾನ ಕೊಟ್ಟಿದ್ದರು. ನಾನು ನನಗೆ ದಾನ ಕೊಟ್ಟ ಆಸ್ತಿಯನ್ನು Miss ಕಮಲ ಇವರಿಗೆ ಮಾರಾಟ ಮಾಡಿದ್ದೆನು. ನನಗೆ ದಾನ ಕೊಟ್ಟರವರ ಪತ್ನಿ ಶ್ರೀಮತಿ ರೀಟಾ ರವರು ಸದರಿ 1 ಎಕರೆ ಜಮೀನನ್ನು Miss ಕಮಲರವರಿಗೆ ಮಾರಾಟ ಮಾಡಿಸಿದರು, ನನಗೆ ಮಾರಾಟದ ಹಣ ಕೇವಲ 30,000/- ರೂ ಮಾತ್ರ ಕೊಟ್ಟಿದ್ದರು. ಈ ಸಮಯಕ್ಕೆ ಸಾಕ್ಷಿ ಕಡತದಲ್ಲಿರುವ ದೃಢೀಕೃತ ಕ್ರಯ ಪತ್ರದ ನಕಲನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-**212** ಎಂದು ಗುರುತಿಸಲಾಯಿತು. ಸಾಕ್ಷಿ ರಿಚರ್ಡ್ ಆ್ಯಂಟನಿ ಫ್ರಾನ್ಸಿಸ್ ಕ್ಸೇವಿರ್ ಮೇನೇಜಸ್ ಮತ್ತು ರೀಟ ಎಗ್ನೆಸ್ ಫಿಲೋಮಿನ್ ರವರು ತಮ್ಮ 10 ಎಕರೆ ಜಮೀನನ್ನು Miss ಕಮಲ ರವರಿಗೆ ಮಾರಾಟ ಮಾಡಿದ್ದು, ಅದಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿದ್ದೇನೆ ಎಂದು ಒಪ್ಪಿಕೊಂಡಿದ್ದು, ಸದರಿ ದಾಖಲೆಯ ಜೆರಾಕ್ಸ್ ಪ್ರತಿ ಈಗಾಗಲೇ ನಿಪಿ-188 ಎಂದು ಗುರುತಿಸಲಾಗಿದ್ದು, ದೃಢೀಕೃತ ನಕಲನ್ನು

ನಿಪಿ-**188(ಬಿ)** ಎಂದು ಗುರುತಿಸಲಾಯಿತು.

**<u>ಪಾಟೀಸವಾಲು- ಆರೋಪಿ ಪರ ವಕೀಲರಾದ ಶ್ರೀ. ಪಿ.ಕೆ.ಎಸ್. ರವರಿಂದಃ</u>**

ನನಗೆ ದಾನವಾಗಿ ಬಂದ ಜಮೀನನ್ನು ನಾನು Miss ಕಮಲರವರಿಗೆ ಮಾರಾಟ ಮಾಡಿರುತ್ತೇನೆ. ಸದರಿ ಜಮೀನು ಮಾರಾಟ ಮಾಡಿದ್ದಕ್ಕೆ ನನಗೆ 30,000/- ರೂ ಶ್ರೀಮತಿ ರೀಟ ರವರಿಂದ ಪಡೆದುಕೊಂಡಿರುತ್ತೇನೆ. ಖರೀದಿ ಪತ್ರ ಆದ ದಿನ ಆರೋಪಿ ಹಾಜರಿರಲಿಲ್ಲ. ನಿಪಿ-188 ಮತ್ತು ನಿಪಿ-188(ಬಿ) ಖರೀದಿ ಪತ್ರ ಆಗುವಾಗ ಆರೋಪಿ ಹಾಜರಿರಲಿಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ.